ವಿಷಯ :- ತುಂಗಾಭದ್ರಾ ಎಡದಂಡೆ ಕಾಲುವೆಯ ಕಳಪೆ ಕಾಮಗಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 931 (1713)

ಶ್ರೀ ಗಂಗಾಧರ್ ನಾಯಕ್ (ಮಾನ್ವಿ) :- ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ಕಾಮಗಾರಿಗಳು ಕಳಪೆಯಾಗಿ, ಸರಿಯಾಗಿ ಕೆಲಸ ನಡೆದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉತ್ತಮ ಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ. ಎನ್. ನಾಗೇಗೌಡ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು) :-

ಅ) ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ಕಾಮಗಾರಿಗಳು ಕಳಪೆಯಾಗಿ, ಸರಿಯಾಗಿ ಕೆಲಸ ನಡೆದಿಲ್ಲವೆಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಾಮಗಾರಿಗಳನ್ನು ಸ್ಪೆಸಿಫಿಕೇಷನ್ಸ್ ಪ್ರಕಾರ ಕಟ್ಟುನಿಟ್ಟಾಗಿ ಮಾಡುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚನೆ ನೀಡಲಾಗಿದೆ.

ಆ) ದೂರುಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

ವಿಷಯ :- ಆಯೋಧ್ಯಾ ಘಟನೆಯ ಹಿನ್ನೆಲೆಯಲ್ಲಿ ಉಳ್ಳಾಲದಲ್ಲಿ ನಡೆದ ಮೊಕದ್ದಮೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 932 (1069)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಳ) :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992 ಡಿಸೆಂಬರ್ 6 ರ ಆಯೋಧ್ಯಾ ಘಟನೆಯ ಹಿನ್ನೆಲೆಯಲ್ಲಿ ಉಳ್ಳಾಲದಲ್ಲಿ ನಡೆದ ಅಹಿತಕರ ಘಟನೆಯ ಎಷ್ಟು ಜನರ ಮೇಲೆ ಮೊಕದ್ದಮೆ ದಾಖಲಾಗಿದೆ?

ಆ) ಈ ಮೊಕದ್ದಮೆಗಳು "ಕಾಕತಾಳೀಯ" ಮತ್ತು ಸುಳ್ಳು ಕೇಸುಗಳೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈಗ ಉಳ್ಳಾಲದಲ್ಲಿ ಶಾಂತಪರಿಸ್ಥಿತಿಯಿರುವುದರಿಂದ ಸದರಿ ಮೊಕದ್ದಮೆಗಳನ್ನು ಸರ್ಕಾರವು ಹಿಂದಕ್ಕೆ ಪಡೆದುಕೊಳ್ಳಲಿದೆಯೇ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :-

ಅ) 628 ಪ್ರಕರಣಗಳಲ್ಲಿ ಒಟ್ಟು 16,616 ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ.

ಆ) ಇಲ್ಲ.

ಇ) ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸ್ವೀಕರಿಸಲಾಗುವ ಮನವಿಗಳನ್ನು ಪರಿಶೀಲಿಸಿ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ವಿಷಯ :- ದ. ಕ. ಜಿಲ್ಲೆಯಲ್ಲಿ ಆಹಾರ ಪಡಿತರ ಚೀಟಿಗಳ ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 933 (1393)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ 5 ತಿಂಗಳುಗಳಿಂದ ಬೇರೆ ಬೇರೆ ಕಾರಣಗಳಿಗಾಗಿ ರದ್ದುಗೊಳಿಸಲಾಗಿದ ಮತ್ತು ಹೆಚ್ಚುವರಿ ನೀಡಲಾದ ಹಸಿರು ಪಡಿತರ ಕಾರ್ಡು ಫಲಾನುಭವಿಗಳ ಸಂಖ್ಯೆ ಎಷ್ಟು ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನ ಸಂಪರ್ಕ ಸಭೆ, ಗ್ರಾಮಸಭೆಗಳು ಅಲ್ಲದೆ ಖಾಸಗಿಯಾಗಿ ಹಸಿರುಪಡಿತರ ಕಾರ್ಡ್ ಕೇಳಿ ಮನವಿ ಸಲ್ಲಿಸಿದವರ ಸಂಖ್ಯೆ ಎಷ್ಟು; (ತಾಲ್ಲೂಕು ವಾರು ಮಾಹಿತಿ ನೀಡುವುದು)

ಇ) ಹೊಸ ಹಸಿರು ಪಡಿತರ ಕಾರ್ಡ್ ನೀಡುವಾಗ ಮತ್ತು ಹಳೇ ಹಸಿರು ಕಾರ್ಡ್ ರದ್ದುಗೊಳಿಸುವಾಗ ಜಿಲ್ಲೆಯಲ್ಲಿ ಬಹಳಷ್ಟು ಬಡವರಿಗೆ ಅನ್ಯಾಯವಾಗಿರುವ ವಿಷಯ ಹಾಗೂ ಇಲಾಖೆಯಲ್ಲಿ ತಾರತಮ್ಯವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

ಅ) 1,47,067

80,105 ಹಸಿರು ಕಾರ್ಡ್, 26680 ಕೇಸರಿ ಕಾರ್ಡ್ ಹಾಗೂ 40,282 ಭಾವಚಿತ್ರ ಪಡಿತರ ಚೀಟಿಗಳನ್ನು ಕಳೆದ 5 ತಿಂಗಳಲ್ಲಿ ರದ್ದುಗೊಳಿಸಲಾಗಿದೆ. ಹೊಸದಾಗಿ ಹಸಿರು ಪಡಿತರ ಚೀಟಿ ನೀಡಲು ಫಲಾನುಭವಿಗಳನ್ನು ಗುರುತಿಸಲು ಗ್ರಾಮಸಭೆಗಳನ್ನು ನಡೆಸಿ ಭಾವಚಿತ್ರ ಪಡಿತರ ಚೀಟಿಗಳನ್ನು ಹಸಿರು ಪಡಿತರ ಚೀಟಿಗಳಿಗೆ ಬದಲಾಯಿಸಿ ಕೊಡುವಾಗ ಈ ಪಡಿತರ ಚೀಟಿಗಳನ್ನು ಪತ್ತೆಹಚ್ಚಿ ರದ್ದುಗೊಳಿಸಲಾಗಿದೆ.